# ಪಿಯರ್‌ಸನ್‌ನಿಂದ ಕಲಿಕಾ ಕಾರ್ಯಕ್ರಮ

ಮಂಗಳೂರು, ಡಿ.6– ಕಲಿಕಾ ಸಂಸ್ಥೆಯಾದ ಪಿಯರ್‌ಸನ್ ತನ್ನ ಯೋಜನೆಯಾದ ವಿದ್ಯಾರ್ಥಿ ಮತ್ತು ಶಿಕ್ಷಕರಿಗಾಗಿನ ಕಲಿಕಾ ಕಾರ್ಯಕ್ರಮವನ್ನು ಮುಂದುವರಿಸಿದೆ. ಸತತವಾಗಿ ಎರಡನೇ ವರ್ಷ ಪಿಯರ್‌ಸನ್‌ನಿಂದ ಶಿಕ್ಷಣ ಕ್ಷೇತ್ರದ ಮುಂಚೂಣಿಯ ಚಿಂತಕರಿಗಾಗಿ ನಡೆದ ಭವಿಷ್ಯದ ಕಲಿಕೆ ಎಂಬ ಕಾರ್ಯಕ್ರಮದ ಮೂಲಕ ಸಾವಿರಾರು ಮಂದಿ ಪ್ರಯೋಜನ ಪಡೆದಿದ್ದಾರೆ.

ಪಿಯರ್‌ಸನ್‌ನ ಸಮಗ್ರ ಕಲಿಕಾ ವ್ಯವಸ್ಥೆಯಾದ ಮೈಪೀಡಿಯಾವನ್ನು 250ಕ್ಕೂ ಹೆಚ್ಚಿನ ಶಾಲೆಗಳಲ್ಲಿ ಬಳಸಲಾಗುತ್ತಿದೆ. ಇದರಿಂದ 60,000 ಮಕ್ಕಳು ತರಗತಿ ತರಬೇತಿಯಿಂದ ಆಚೆಗೆ ಸಾಗುವಂತಹ ಕಲಿಕಾ ಚಿಂತನೆಗಳ

ಲಾಭ ಪಡೆಯುತ್ತಿದ್ದಾರೆ. ಸಮಗ್ರೀಕರಣ ಮತ್ತು ಪ್ರಕ್ರಿಯೆ ಆಧಾರಿತ ಕಲಿಕೆ ಮೂಲಕ ಭಾರತದಲ್ಲಿನ ಶಾಲಾ ಕೊಠಡಿಗಳಲ್ಲಿ ಶಿಕ್ಷಣ ವಿತರಣೆಯನ್ನು ಪರಿವರ್ತಿಸುವ ಉದ್ದೇಶವನ್ನು ಮೈಪೀಡಿಯಾ ಹೊಂದಿದೆ. ಪಿಯರ್‌ಸನ್ ತನ್ನ ಕಲಿಕಾ ಕಾರ್ಯಕ್ರಮವನ್ನು ಇನ್ನಷ್ಟು ವ್ಯಾಪಕವಾಗಿ ಮುಂದುವರಿಸಲಿದೆ ಎಂದು ಪಿಯರ್‌ಸನ್ ಇಂಡಿಯಾದ ಉಪಾಧ್ಯಕ್ಷ ಉಜ್ವಲ್ ಸಿಂಗ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.